# ಶ್ರೀಶ್ರೀಶ್ರೀ 1008ಶ್ರೀಅಕ್ಷೋಭ್ಯತೀರ್ಥ ಶ್ರೀಪಾದಂಗಳವರ ಚರಿತ್ರೆ

(ಕ್ರೀ.ಶ.1809–1811)

**ಪೂರ್ವಾಚಾರ್ಯೋಚಿತಂ ಕರ್ಮ ವಿತನ್ವನ್ ಭಕ್ತಿಮಾತ್ರತಃ।**
**ಕಾಣ್ವೇಷು ಯೋ ಹಿ ಸಂಪ್ರೀತಃ ತಮಕ್ಷೋಭ್ಯಮುನಿಂ ಭಜೇ॥**

ಶ್ರೀಕಣ್ವಮಠ ಸ್ಥಾಪಕರಾದ ಶ್ರೀಮನ್ಮಾಧವತೀರ್ಥರ ಕರಸಂಜಾತರಾದ ಶ್ರೀಶ್ರೀಶ್ರೀಅಕ್ಷೋಭ್ಯತೀರ್ಥರು ಕಣ್ವಮಠದ ಯತಿಪರಂಪರೆಯಲ್ಲಿ ಎರಡನೆಯ ಯತಿಗಳು. ಇವರು ಶಾ. ಶಕೆ 1731 [ಕ್ರಿ.ಶ. 1809 ] ರಿಂದ ಶಾ.ಶಕೆ 1733 [ಕ್ರಿ.ಶ. 1811] ರ ವರೆಗೆ ಅಂದರೆ ಕೇವಲ ಎರಡು ವರ್ಷ ಕಾಲವಷ್ಟೇ ವೇದಾಂತ ಸಾಮ್ರಾಜ್ಯವಾಳಿದರು. ಅವರ ಕಾಲ ಅಲ್ಪಾವಧಿ ಅನಿಸಿದರೂ ಅವರು ಮಾಡಿದ ಕೆಲಸ ಬಹು ದೊಡ್ಡದು. ಬುದ್ದಿನ್ನಿಯ ದೇಸಾಯಿ ಅವರ ಸೇವೆಯನ್ನು ಬಳಸಿಕೊಂಡು ತಮ್ಮ ಗುರುಗಳಾದ ಶ್ರೀಮಾಧವತೀರ್ಥರ ಸುಂದರ ವೃಂದಾವನವನ್ನು ಬುದ್ದಿನ್ನಿಯಲ್ಲಿ ನಿರ್ಮಿಸಿದರು. ಇಂದಿಗೂ ಆ ವೃಂದಾವನದ ತೇಜ ಕಣ್ಣು ತುಂಬುತ್ತದೆ. ಶ್ರೀಕಣ್ವಮಠ ಪರಂಪರೆಯಲ್ಲಿ ಹೆಚ್ಚಾಗಿ ಗ್ರಹಸ್ಥಾಶ್ರಮಿಗಳೇ ಮಠದ ವೇದಾಂತ ಸಾಮ್ರಾಜ್ಯವನ್ನು ಆಳಿದ್ದಾರೆ. ಆದರೆ ಶ್ರೀಅಕ್ಷೋಭ್ಯರು ಬ್ರಹ್ಮಚರ್ಯಾಶ್ರಮದಲ್ಲಿಯೇ ಪೀಠಾರೋಹಣ ಮಾಡಿದ್ದಾರೆ ಎಂಬುದು ವಿಶೇಷ ಸಂಗತಿ.

ಶ್ರೀ ಅಕ್ಷೋಭ್ಯತೀರ್ಥರ ಮೂಲ ಸ್ಥಾನ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹಿರೇಕೊಟ್ನಕಲ್ಲು ಗ್ರಾಮವಾಗಿದೆ. ಇವರ ಪೂರ್ವಾಶ್ರಮದ ವಂಶಸ್ಥರು ಈಗಲೂ ಈ ಗ್ರಾಮದಲ್ಲಿದ್ದಾರೆ. ಅವರನ್ನು ಸಂಪರ್ಕಿಸಿದಾಗ ಅನೇಕ ಹೊಸ ಸಂಗತಿಗಳು ಬೆಳಕಿಗೆ ಬಂದವು. ಇವರದು ಭಾರದ್ವಾಜ ಗೋತ್ರ. ಇವರ ಮನೆತನಕ್ಕೆ ಸೇರಿದ ದಂತಕತೆಯೊಂದು ಬಹು ರೋಚಕವಾಗಿದೆ. ಇವರ ಮನೆತನದ ಮೂಲಪುರುಷ 9–10 ನೇ ಶತಮಾನದಲ್ಲಿ ಚಿಕ್ಕಬಳ್ಳಾಪುರದಿಂದ ಈ ಪ್ರದೇಶಕ್ಕೆ ಬಂದು ದೇವದುರ್ಗದ ದಿವಾನ ಹುದ್ದೆಯನ್ನು ಅಲಂಕರಿಸಿ ದೊರೆಗೆ ಬಲಗೈಯಂತೆ ಇದ್ದವರು. ಆ ದೊರೆಗೆ ಏಳು ಜನ ಹೆಂಡಿರು. ದೊರೆಗೂ ಈ ದಿವಾನರಿಗೂ ಇದ್ದ ಅನ್ಯೋನ್ಯತೆಯನ್ನು ಸಹಿಸದ ಕೆಲವು ವಿಘ್ನಸಂತೋಷಿಗಳು ದೊರೆಯ ಏಳು ಜನ ಹೆಂಡಿರಲ್ಲಿ ಒಬ್ಬಳನ್ನು ದಿವಾನರೊಂದಿಗೆ [ಭೀಮರಾಯ] ಅನೈತಿಕ ಸಂಬಂಧವನ್ನು ಕಲ್ಪಿಸಿ ದೊರೆಯ ಕಿವಿಗೆ ಈ ಸುದ್ದಿಯನ್ನು ನಂಬುವಂತೆ ಹೇಳಿದರು. ಕೋಪಗೊಂಡ ದೊರೆ ದುಡುಕಿನಿಂದ ಪೂರ್ವಾಪರ ವಿಚಾರಮಾಡದೆ ದಿವಾನರನ್ನು ಒಂಟಿಯಾಗಿ ಕರೆಸಿಕೊಂಡು ನಿರ್ಜನ ಪ್ರದೇಶದತ್ತ ಕರೆದೊಯ್ದು ಕಾರಣವನ್ನೂ ಹೇಳದೆ ಚಿತ್ರಹಿಂಸೆಮಾಡಿ ಕೊಲ್ಲಿಸಲು ಪ್ರಯತ್ನಿಸಿದಾಗ ಜೀವ ಹೋಗುವ ಕೊನೆಘಳಿಗೆಯಲ್ಲಿ ದಿವಾನರೇ ಕಾರಣ ಕೇಳಿದಾಗ ದೊರೆ ವಿಷಯ ಹೇಳಲಾಗಿ ದಿವಾನರು " ನಿಮ್ಮ ಏಳೂಜನ ಪತ್ನಿಯರೂ ನನಗೆ ಹೆತ್ತ ತಾಯಿಗೆ ಸಮ. ಯಾರದೋ ಮಾತು ಕೇಳಿ ನೀವು ನನ್ನ ವಿಷಯದಲ್ಲಿ ತಪ್ಪು ನಿರ್ಣಯ ತೆಗೆದುಕೊಂಡಿರಿ. ನಾನು ಇದೇ ಕ್ಷಣ ಶಾಪ ಕೊಡುತ್ತೇನೆ. ನಿಮ್ಮ ವಂಶ ನಿರ್ವಂಶವಾಗಲಿ. ಅದೇ ರೀತಿ ನನ್ನ ವಂಶದ ಜನ ದೇವದುರ್ಗದ ನೆಲವನ್ನು ಮೆಟ್ಟದಿರಲಿ." ಎಂದು ಶಪಿಸಿ ತನ್ನ ಜನಿವಾರದಿಂದಲೇ

ಉರುಲು ಬಿಗಿದುಕೊಂಡು ಜೀವ ಬಿಟ್ಟನಂತೆ. ಇಂದಿಗೂ ಹಿರೇಕೊಟ್ನಕಲ್ಲಿನ ದಿವಾನರ ವಂಶಸ್ಥರು ದೇವದುರ್ಗದ ನೆಲಮೆಟ್ಟುವುದಿಲ್ಲ. ಅಲ್ಲಿ ಜಲಪಾನವನ್ನೂ ಮಾಡುವುದಿಲ್ಲ ಒಂದುವೇಳೆ ಮಾಡಿದರೆ ಬಹಳ ಪಶ್ಚಾತ್ತಾಪ ಪಡುವಂತೆ ಕಷ್ಟಗಳು ಎದುರಾಗುತ್ತವೆ. [ಈ ವಂಶಜರು ಹೇಳುವ ಮಾತು.] ಮುಂದೆ ದಿವಾನಗಿರಿಯನ್ನು ಕಳೆದುಕೊಂಡು ದೇಶಪಾಂಡೆಯಾಗಿ, ಹರಿದಾಸ ಮನೆತನದವರೆಂದು ಹೆಸರುಮಾಡಿದರು. ಈ ಹಿನ್ನೆಲೆಯಲ್ಲಿ ಇವರ ಮನೆತನ ಗಂಡುಗಲಿ ಶೂರರ ಮನೆತನ. ಇಷ್ಟು ಮಾತ್ರವಲ್ಲದೆ ಪಾಂಡಿತ್ಯಕ್ಕೂ ಕೊರತೆಯಿಲ್ಲ ಎಂಬುದಕ್ಕೆ ಹರಿದಾಸ ಮನೆತನವೂ ಹೌದು. ಇಂತಹ ಮನೆತನದಲ್ಲಿ ಶ್ರೀಅಕ್ಷೋಭ್ಯತೀರ್ಥರು ಕ್ರಿ.ಶ.ಸು 1781 ರಲ್ಲಿ ಜನ್ಮತಾಳಿರುವರು. ಗುರುಗಳ ಪೂರ್ವಾಶ್ರಮದ ನಾಮಧೇಯ ಲಭ್ಯವಾಗಿಲ್ಲ.

ಶ್ರೀಮಾಧವತೀರ್ಥರು ಕ್ರಿ.ಶ. 1796 ರಲ್ಲಿ ಶ್ರೀಕಣ್ವಮಠ ಸ್ಥಾಪನೆಮಾಡಿ ಹದಿಮೂರು ವರ್ಷ ವೇದಾಂತ ಸಾಮ್ರಾಜ್ಯವನ್ನು ಆಳಿದರು. ಅವರು ತಮ್ಮ ಕೊನೆಯ ದಿನಗಳಲ್ಲಿ ಸಂಚಾರ ಮಾಡುತ್ತ ಅನಂತಪುರ ಮುಕ್ಕಾಮಿನಲ್ಲಿದ್ದಾಗ ದೇಹಾರೋಗ್ಯವು ಹದಗೆಟ್ಟಿತು. ತಾವು ವೃಂದಾವನಸ್ಥರಾಗುವ ಕಾಲ ಸಮೀಪಿಸಿತೆಂದು ತಮ್ಮ ದಿವ್ಯ ದೃಷ್ಠಿಯಿಂದ ತಿಳಿದುಕೊಂಡು ತಮ್ಮ ಮುಂದಿನ ಪ್ರಯಾಣವನ್ನು ಮೊಟಕುಗೊಳಿಸಿ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲೂಕಿನ ಬುದ್ದಿನ್ನಿ ಗ್ರಾಮದ ಕಡೆಗೆ ತಮ್ಮ ಪ್ರಯಾಣ ಬೆಳೆಸಲು ಇಚ್ಛಿಸಿದರು.

ಶ್ರೀಮಾಧವತೀರ್ಥರು ಕಣ್ವಮಠ ಸ್ಥಾಪನೆ ಮಾಡಿದಾಗಿನಿಂದಲೂ ಗುರುಗಳ ಜೊತೆಗೆ ಅನ್ಯೋನ್ಯ ಸಂಬಂಧವನ್ನು ಪೂರ್ವಾಶ್ರಮದಿಂದಲೇ ಇಟ್ಟುಕೊಂಡಿದ್ದ ಅಕ್ಷೋಭ್ಯತೀರ್ಥರು ಪ್ರತಿವರ್ಷ ವಿಜೃಂಬಣೆಯಿಂದ ನಡೆಯುತ್ತಿದ್ದ ಶ್ರೀಮಾಧವತೀರ್ಥರ ಪಟ್ಟಬಂಧೋತ್ಸವ ಕಾರ್ಯಕ್ರಮಕ್ಕೆ ತಪ್ಪದೆ ವೀರಘಟ್ಟಕ್ಕೆ ಬರುತ್ತಿದ್ದರು. ಅಲ್ಲದೆ ಹೆಚ್ಚಿನದಿನಗಳನ್ನು ಗುರುಗಳ ಸನ್ನಿಧಾನದಲ್ಲಿಯೇ ಕಳೆಯುತ್ತಿದ್ದರು. ಚಿಕ್ಕವಯಸ್ಸಿನಲ್ಲಿಯೇ ವೈರಾಗ್ಯಶಿಖಾಮಣಿಗಳಾಗಿದ್ದ ಇವರು ಗುರುಗಳಲ್ಲಿ ಸನ್ಯಾಸ ದೀಕ್ಷೆಯನ್ನು ಅಪೇಕ್ಷಿಸಿದ್ದರು. ಅದಕ್ಕೆ ಗುರುಗಳು ಸಂದರ್ಭ ಬಂದಾಗ ಅವಶ್ಯವಾಗಿ ಕೊಡುವೆನೆಂದೂ ಹೇಳಿದ್ದರು.

ಹೀಗೆ ಒಂದು ದಿನ ವೀರಘಟ್ಟದಲ್ಲಿ ವಾಸ್ತವ್ಯ ಮಾಡಿದಾಗ ಒಂದು ಅಪರೂಪದ ಘಟನೆ ನಡೆಯಿತು. ಏಕಾದಶಿದಿನ ಶ್ರೀಮಾಧವತೀರ್ಥರು ಬೆಟ್ಟದ ಮೇಲಿರುವ ವೀರಾಂಜನೇಯನ ಸನ್ನಿಧಾನದಲ್ಲಿ ಧ್ಯಾನಸ್ಥರಾಗಿ ಕುಳಿತಿದ್ದರು. ಗುರುಗಳನ್ನು ಅರಸಿಕೊಂಡು ಇವರು ಬೆಟ್ಟ ಹತ್ತಿ ಮೇಲೆ ಬಂದಾಗ ಸರ್ಪಗಳು ಗುರುಗಳ ಮೈಮೇಲೆ ಹರಿದಾಡುತ್ತ ಅವರ ಹೃದಯದಲ್ಲೇ ಐಕ್ಯವಾದಂತಹ ದೃಶ್ಯವನ್ನು ಕಣ್ಣಾರೆಕಂಡು ದಿಗ್ಭಾಂತರಾದರು. ಈ ಘಟನೆಯಿಂದ ಗುರುಗಳ ಮೇಲಿನ ಭಕ್ತಿ, ಗೌರವ, ಶ್ರದ್ಧೆ ಇಮ್ಮಡಿಯಾದವು. ಗುರುಗಳು ಶೇಷಾಂಶಸಂಭೂತರು ಎಂಬುದು ಮನದಟ್ಟಾಯಿತು. ಶ್ರೀಮಾಧವತೀರ್ಥರು ತಮ್ಮ ಕೊನೆದಿನಗಳಲ್ಲಿ ಯಾತ್ರೆಯನ್ನು ಮೊಟಕುಗೊಳಿಸಿ ಬುದ್ದಿನ್ನಿಗೆ ಬರಲು ಇಚ್ಛಸಿದರು. ಅನಂತಪುರದಿಂದ ಬುದ್ದಿನ್ನಿ ಗ್ರಾಮದವರೆಗೆ ಸುಮಾರು 300 ಕಿ.ಮೀ. ಕ್ರಮಿಸಬೇಕಿತ್ತು. ಮಾರ್ಗಮಧ್ಯದಲ್ಲಿ ಅಲ್ಲಲ್ಲಿ

ವಾಸ್ತವ್ಯ ಹೂಡುತ್ತ ಹಿರೇಕೊಟ್ನಕಲ್ಲಿಗೆ ಅಕ್ಷೋಭ್ಯರ ಪೂರ್ವಾಶ್ರಮದ ಮನೆಗೆ ಬಂದರು. ಶ್ರೀಮಾಧವತೀರ್ಥರ ಗುರುತ್ವವನ್ನು ಒಪ್ಪಿ ಗೌರವದಿಂದ ನಡೆದುಕೊಳ್ಳುತ್ತಿದ್ದ ಈ ಮನೆಯ ಹಿರಿಯರು ಅಪಾರ ಪ್ರೀತ್ಯಾದರಗಳಿಂದ ಶ್ರೀಮಾಧವತೀರ್ಥರನ್ನು ಆದರಿಸಿ ಪೂಜಿಸಿದರು. ಶ್ರೀಪಾದಂಗಳವರು ಈ ಮೊದಲೇ ಇಬ್ಬರಿಗೆ ಸನ್ಯಾಸದೀಕ್ಷೆ ಕೊಟ್ಟಿದ್ದರಾದರೂ ಅವರು ಮೋಕ್ಷಾರ್ಥವಾಗಿ ಸ್ವೀಕರಿಸಿದವರು. ಮುಖ್ಯ ಪೀಠಕ್ಕಾಗಿ ಇನ್ನೊಬ್ಬರನ್ನು ನೋಡಲೇಬೇಕಿತ್ತು. ತಮ್ಮ ನಂತರದಲ್ಲಿ ವೇದಾಂತ ಸಾಮ್ರಾಜ್ಯವನ್ನಾಳಲು ಬ್ರಹ್ಮಚಾರಿಯಾಗಿದ್ದ ಅಕ್ಷೋಭ್ಯರೇ ಯೋಗ್ಯವ್ಯಕ್ತಿ ಎಂದು ನಿರ್ಧರಿಸಿ, " ನಿಮ್ಮ ಸನ್ಯಾಸ ದೀಕ್ಷೆಯ ಕೋರಿಕೆಗೆ ಈಗ ಕಾಲ ಕೂಡಿ ಬಂದಿದೆ. ನಿಮಗೆ ಆಶ್ರಮವನ್ನು ಪ್ರದಾನ ಮಾಡುತ್ತೇವೆ." ಎಂದು ಹೇಳಿದರು. ಯುವಕನಾದರೂ ಇದು ತನ್ನ ಅಹೋಭಾಗ್ಯವೆಂದುಕೊಂಡು ಬಹು ಭಕ್ತಿಯಿಂದ ಗುರುವಾಕ್ಯ ಪರಿಪಾಲಕನಾದನು. ಶಿಷ್ಯವರ್ಗ ಆನಂದ ಸಾಗರದಲ್ಲಿ ಮುಳುಗಿತು. ಹಿರೇಕೊಟ್ನಕಲ್ಲಿನಿಂದ ಸುಮಾರು 20 ಕಿ.ಮೀ. ದೂರದಲ್ಲಿದ್ದ ತುಂಗಭದ್ರಾ ನದಿ ತೀರದ ಪವಿತ್ರ ಕ್ಷೇತ್ರ ಚೀಕಲಪರವಿಯಲ್ಲಿ ಶ್ರೀಮಾಧವತೀರ್ಥರು ಯುವಕನಿಗೆ ಸನ್ಯಾಸದೀಕ್ಷೆ ಕೊಟ್ಟು "ಅಕ್ಷೋಭ್ಯತೀರ್ಥ'ರೆಂದು ನಾಮಾಭಿದಾನವನ್ನು ಕರುಣಿಸಿದರು. ಶಾ.ಶಕೆ 1732 {ಕ್ರಿ.ಶ.1809} ಶುಕ್ಲನಾಮ ಸಂವತ್ಸರ ಚೈತ್ರಶುದ್ಧ ಚತುರ್ಥಿಯ ಪುಣ್ಯದಿನದಂದು ಶ್ರೀಮಾಧವತೀರ್ಥರು ವೃಂದಾವನಸ್ಥರಾದಮೇಲೆ ಶ್ರೀಅಕ್ಷೋಭ್ಯತಿರ್ಥರು ಪೀಠವನ್ನು ಅಲಂಕರಿಸಿದರು.

ಶ್ರೀಮಠದ ಶಿಷ್ಯವರ್ಗ ನೂತನ ಶ್ರೀಪಾದಂಗಳವರನ್ನು ಭಕ್ತ್ಯಾದರದಿಂದ ಸೇವಿಸತೊಡಗಿದರು. ಸುರಪುರದ ನಾಯಕರಾದ ರಾಜಾ ನಾಲ್ವಡಿ ಪಿಡ್ಡನಾಯಕರು ಶ್ರೀಅಕ್ಷೋಭ್ಯತೀರ್ಥರಿಗೆ ರಾಜ ಮರ್ಯಾದೆ ಗೌರವಗಳೊಂದಿಗೆ ಆದರಿಸಿ ಅದ್ದೂರಿಯಾಗಿ ಸುರಪುರ ನಗರ ಪ್ರವೇಶವನ್ನು ಮಾಡಿಸಿದರು. ಶ್ರೀಅಕ್ಷೋಭ್ಯರು ತಮ್ಮ ದೀಕ್ಷಾಗುರುಗಳಾದ ಶ್ರೀಮಾಧವತೀರ್ಥರ ತಪೋಭೂಮಿಯಾದ ವೀರಘಟ್ಟಕ್ಕೆ ಬಂದು ಅಲ್ಲೇ ತಮ್ಮ ಪೂಜೆ ಅನುಷ್ಠಾನಗಳನ್ನು ಮುಂದುವರೆಸಿಕೊಂಡು ಭಕ್ತಾದಿಗಳನ್ನು ಸನ್ಮಾರ್ಗದಲ್ಲಿ ನಡೆಸತೊಡಗಿದರು. ಶ್ರೀಮಾಧವತೀರ್ಥರು ತಮ್ಮ ಜೀವಿತಾವಧಿಯಲ್ಲಿಯೇ ತಮ್ಮ ವೃಂದಾವನ ಕಲ್ಲನ್ನು ತಾವೇ ಆಯ್ಕೆಮಾಡಿಕೊಂಡಿದ್ದರು. ಅದು ಮಸ್ಕಿ ಸಮೀಪದ ಹಿಲಾಲಪುರ ಗುಡ್ಡದ ಬಂಡೆ. ಈ ಬಂಡೆ ಸಾಮಾನ್ಯದ ಬಂಡೆಯಲ್ಲ ಭಗವಂತ ಶ್ರೀರಾಮಪಾದ ಸ್ಪರ್ಶಶಿಲೆ. [ಆ ಬಂಡೆಯ ಮೇಲೆ ಈಗಲೂ ಕ್ರಿ.ಶ.ಪೂ. 1000 ವರ್ಷಗಳ ಹಿಂದೆ ಅಂದರೆ ಬೃಹತ್ ಶಿಲಾ ಸಂಸ್ಕೃತಿ ಕಾಲದ ಆನೆಯೊಂದರ ಕುಟ್ಟುಚಿತ್ರವನ್ನು ಕಾಣಬಹುದು] ಶ್ರೀಅಕ್ಷೋಭ್ಯರು ತಮ್ಮ ಗುರುಗಳ ಇಚ್ಛೆಯಂತೆ ಬುದ್ದಿನ್ನಿ ದೇಸಾಯರ ಅನನ್ಯ ಸೇವೆಯನ್ನು ಬಳಸಿಕೊಂಡು ಆ ಬಂಡೆಯನ್ನು ಕೊರೆಸಿ ಸುಂದರವಾದ ವೃಂದಾವನವನ್ನು ಮಾಡಿಸಿ ಬುದ್ದಿನ್ನಿಯಲ್ಲಿ ಸ್ಥಾಪಿಸಿದರು. ಗುರುಗಳ ನಿತ್ಯ ಸೇವೆಯ ಜವಾಬ್ದಾರಿಯನ್ನು ದೇಸಾಯರಿಗೆ ಒಪ್ಪಿಸಿ ತಾವು ವೀರಘಟ್ಟದಲ್ಲಿ ನೆಲೆಸಿದರು.

ಒಂದು ದಿನ ಬಿಳೇಬಾವಿ ಗ್ರಾಮದ ದೇಶಪಾಂಡೆಯವರು ಗುರುದರ್ಶನಕ್ಕಾಗಿ ವೀರಘಟ್ಟಕ್ಕೆ ಬಂದರು. ಆಗ ತಮ್ಮ ಕನಸಿನ ವೃತ್ತಾಂತವನ್ನು ಶ್ರೀಅಕ್ಷೋಭ್ಯತೀರ್ಥರಿಗೆ

ತಿಳಿಸಿಲಿಚ್ಚಿಸಿದರು. ತಮ್ಮ ಕನಸಿನಲ್ಲಿ ಯತಿಯೊಬ್ಬರು ಬಂದು " ನಾನು ನಿನ್ನ ಬಳಿ ನೆಲೆಸಬೇಕೆಂದಿರುವೆ ಸೇವೆ ಮಾಡಲು ಸಾಧ್ಯವೇ " ಎಂದು ಕೇಳಿದಂತಾಯಿತು ಆ ಯತಿಗಳು ಯಾರೆಂದು ತಿಳಿಯಲಿಲ್ಲ." ಎಂದು ಗುರುಗಳಿಗೆ ಹೇಳಿದರು. ತಕ್ಷಣವೇ ಗುರುಗಳು " ಬೇರೆಯಾರೂ ಅಲ್ಲ ನಾನೇ ಕೇಳಿದ್ದು ಇದಕ್ಕೆ ನಿಮ್ಮ ಉತ್ತರವೇನು?" ಎಂದು ಕೇಳಿದರು. ಶ್ರೀಪಾದಂಗಳವರ ಮಾತಿನಿಂದ ದೇಶಪಾಂಡೆಯವರು ದಿಗ್ಭ್ರಾಂತರಾದರು. ಮಠದ ಅನನ್ಯ ಭಕ್ತರಾದ ಅವರು ಸೇವೆಗೆ ಒಪ್ಪಿದರಾದರೂ ಇಷ್ಟು ಅಲ್ಪಾವಧಿಯಲ್ಲಿ ಶ್ರೀಅಕ್ಷೋಭ್ಯರ ವೈಕುಂಠ ದಿಗ್ವಿಜಯವನ್ನು ಒಪ್ಪಲಾಗಲಿಲ್ಲ. 'ತೇನವಿನಾ ತೃಣಮಪಿ ನ ಚಲತಿ' ಎಂಬಂತೆ ಅವನಿಚ್ಛೆಯಂತೆ ಎಲ್ಲವೂ ನಡೆಯುವುದು ಎಂಬುದನ್ನು ಅರಿತಿದ್ದ ದೇಶಪಾಂಡೆಯವರು ಹರಿಚಿತ್ತವೆಂದು ಸುಮ್ಮನಾದರು. ಮಠದ ಸಾಮ್ರಾಜ್ಯವನ್ನು ಕೇವಲ ಎರಡು ವರ್ಷ ಆಳಿದ ಶ್ರೀಅಕ್ಷೋಭ್ಯರು ರಾಯಚೂರು ಜಿಲ್ಲೆಯ ಸಿಂಧನೂರು ಗ್ರಾಮದ ಕೌಡಿಣ್ಯ ಗೋತ್ರೋತ್ಪನ್ನರಾದ ಶ್ರೀಜಯಭೀಮಸೇನಾಚಾರ್ಯರಿಗೆ 'ವಿದ್ಯಾಧೀಶರೆಂಬ' ನಾಮಾಭಿದಾನದಿಂದ ಯತ್ಯಾಶ್ರಮ ಕರುಣಿಸಿ ತಾವು ಶಾ.ಶಕ 1733 [ಕ್ರಿ.ಶ.1811] ಪ್ರಜಾಪತಿನಾಮ ಸಂವತ್ಸರ ಭಾದ್ರಪದ ಶುಕ್ಲ ಚತುರ್ದಶಿ ದಿನ ವೃಂದಾವನಸ್ಥರಾದರು. ಬಿಳೆಬಾವಿ ದೇಶಪಾಂಡೆಯವರು ಗುರುಗಳಿಗೆ ಕೊಟ್ಟ ಮಾತಿನಂತೆ ಬಿಳೆಬಾವಿಯಲ್ಲಿ ಎಲ್ಲ ವ್ಯವಸ್ಥೆಮಾಡಿ ಸುಂದರ ವೃಂದಾವನವನ್ನು ನಿರ್ಮಿಸಿದರು.

ಮಹಾಮಹಿಮಾವಂತರಾದ ಶ್ರೀಅಕ್ಷೋಭ್ಯರು ಕೇವಲ ಎರಡು ವರ್ಷ ಪೀಠದಲ್ಲಿದ್ದರೂ ಅವರ ತಪಃಶಕ್ತಿ ಅಘಾದವಾದದ್ದು. ಇಂದಿಗೂ ನಂಬಿಬಂದ ಭಕ್ತರನ್ನು ಪೊರೆಯುತ್ತಿರುವರು. ಅವರು ವೃಂದಾವನಸ್ಥರಾದ ಮೇಲಿಂದ ಇಂದಿನವರೆಗೂ ಅನೇಕ ಪವಾಡ ಸದೃಶ್ಯ ಘಟನೆಗಳು ನಡೆದಿವೆ. ನಡೆಯುತ್ತಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ದಾಖಲಿಸಿದೆ. ಶ್ರೀಅಕ್ಷೋಭ್ಯರು ವೃಂದಾವನಸ್ಥರಾಗಿ 5–6 ವರ್ಷಗಳಲ್ಲಿ ನಡೆದ ಘಟನೆಯಿದು. ಬಿಳೆಬಾವಿ ದೇಶಪಾಂಡೆಯವರು ತಮ್ಮ ಅತಿಶಯ ಗುರುಭಕ್ತಿಯಿಂದ ಸೇವೆ ಮಾಡತೊಡಗಿದ್ದರು. ವಿಜೃಂಭಣೆಯಿಂದ ಆರಾಧನಾ ಮಹೊತ್ಸವವನ್ನು ನಡೆಸಿಕೊಂಡು ಬರತೊಡಗಿದರು. ಒಮ್ಮೆ ದೇಶಪಾಂಡೆಯವರು ಯಾವುದೋ ವ್ಯವಹಾರದಲ್ಲಿ ಕ್ರಿಮಿನಲ್ ಕೇಸಿನಲ್ಲಿ ಸಿಲುಕಿ ಪೇಚಾಡತೊಡಗಿದರು. ಈ ವ್ಯಾಜ್ಯದಿಂದ ಹೊರಬರುವ ಯಾವ ಲಕ್ಷಣಗಳೂ ಕಾಣಲಿಲ್ಲ. ಇದೇ ಸಮಯಕ್ಕೆ ಗುರುಗಳ ಆರಾಧನೆ ಬಂತು. ದೇಶಪಾಂಡೆಯವರಿಗೆ ಉತ್ಸಾಹವೇ ಇರಲಿಲ್ಲ. ಬಹು ನೊಂದುಕೊಂಡು "ನಿರಪರಾಧಿಯಾದ ನನಗೆ ಈ ಶಿಕ್ಷೆ ಸರಿಯಲ್ಲ. ಆದರೂ ಅನುಭವಿಸುವಂತಾಗಿದೆ. ಸಜ್ಜನರಿಗೆ ಕಾಲವಿಲ್ಲ. ಗುರುಗಳು ಎಲ್ಲಿದ್ದಾರೆ? ನಾನೇಕೆ ಅವರ ಆರಾಧನೆ ಮಾಡಬೇಕು?' ಎಂದು ನಿರುತ್ಸಾಹಿಗಳಾಗಿ ನುಡಿದರು. ಅದೇದಿನ ರಾತ್ರಿ ಶ್ರೀಅಕ್ಷೋಭ್ಯರು ಅವರ ಕನಸಿನಲ್ಲಿ ಕಂಡು "ಆರಾಧನೆ ನಿಲ್ಲಿಸಬೇಡ. ನಿನ್ನ ಸಮಸ್ಯೆ ತನಗೆ ತಾನೇ ನಿವಾರಣೆ ಯಾಗುತ್ತದೆ.' ಎಂದು ಹೇಳಿದರು. ಗುರು ಆಜ್ಞೆಯಂತೆ ಆರಾಧನೆಯನ್ನು ಬಹು ಭಕ್ತಯಿಂದ ಮಾಡಿದರು. ಮುಂದೆ ಕೆಲವೇ ದಿನಗಳಲ್ಲಿ ಆಶ್ಚರ್ಯಕರ ರೀತಿಯಲ್ಲಿ ಆ ಕ್ರಿಮಿನಲ್ ಕೇಸ್‌ನಿಂದ ಹೊರಬಂದರು.

ಹಲವು ವರ್ಷಗಳ ಹಿಂದೆ ಬೆಳಗಿನ ಜಾವ ರೈತನೊಬ್ಬನು ರಂಟೆ ಹೊಡೆಯಲು ಹೊಲಕ್ಕೆ ಹೋಗುವಾಗ ಬಾವಿಯ ದಡದಲ್ಲಿ ಯತಿಗಳೊಬ್ಬರು ಸ್ನಾನಮಾಡಿ ಶಾಟಿ ಹಿಂಡುತ್ತಿರುವುದನ್ನು ಕಂಡನು. ರೈತನನ್ನು ಕಂಡ ಶ್ರೀಗುರುಗಳು ಬಾವಿಯಲ್ಲಿ ಧುಮುಕಿದರಂತೆ. ಅವನು ರೋಮಾಂಚನಗೊಂಡು ಬಾವಿಯ ಬಳಿ ಹೋದಾಗ ಅವರು ಹಿಂಡಿಟ್ಟ ಶಾಟಿಯನ್ನು ಕಂಡು ಮತ್ತಷ್ಟು ಆಶ್ಚರ್ಯಚಕಿತನಾದನು. ಆ ಶಾಟಿಯನ್ನು ತಂದು ಊರಲ್ಲಿ ಎಲ್ಲರಿಗೂ ತೋರಿಸಲು ಅದು ಗುರುಗಳ ಶಾಟಿಯೆಂದು ಮನನವಾಯಿತು. ರೈತನು ಆ ಶಾಟಿಯನ್ನು ತನ್ನ ಮನೆಯ ದೇವರ ಕಟ್ಟೆಯಲ್ಲಿಟ್ಟು ಪೂಜಿಸುತ್ತಿರುವುದಾಗಿ ಹಾಗೂ ಆತನಿಗೆ ಸಕಲ ಸೌಭಾಗ್ಯಗಳು ಲಭ್ಯವಾಗಿರುವುದಾಗಿ ಬಿಳೆಬಾವಿ ಜನರು ಹೇಳುತ್ತಾರೆ.

ಕ್ರಿ.ಶ. 1977 ರಲ್ಲಿ ಶ್ರೀಕಣ್ವಮಠ ಯತಿ ಪರಂಪರೆಯಲ್ಲಿ ಹತ್ತನೆಯವರಾದ ಶ್ರೀವಿದ್ಯಾತಪೋನಿಧಿತೀರ್ಥರು ಬಿಳೆಬಾವಿಯಲ್ಲಿ ಚಾತುರ್ಮಾಸ ವ್ರತ ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಒಂದುದಿನ ರಾತ್ರಿ ಏಕಾಏಕಿ ಅವರ ಆರೋಗ್ಯ ವಿಪರೀತ ಹದಗೆಟ್ಟಿತು. ತಮ್ಮ ಅವಸಾನ ಸಮೀಪಿಸಿತು ಎಂದುಕೊಂಡರು. ಆಗ ಶ್ರೀಅಕ್ಷೋಭ್ಯರು ಆಗಮಿಸಿ ಅವರ ಮಂಚವನ್ನು ಮುಂದೆ ಎಳೆದು ಮಚ್ಚರದಾನಿಯನ್ನು ತೆಗೆದು ಕಿಟಕಿಯ ಹತ್ತಿರ ಮುಖಮಾಡಿಸಿ " ಚಿಂತಿಸಬೇಡ ಕೂಡಲೇ ಗುಣಮುಖ ಹೊಂದುವೆ ಎಂದು ಹೇಳಿ ಮೈದಡವಿ ಅದೃಶ್ಯರಾದರು. ನಂತರ ಶ್ರೀಗಳು ಗುಣಮುಖರಾದರು. ಚಾತುರ್ಮಾಸ ಯಶಸ್ವಿಯಾಗಿ ಸಮಾಪ್ತವಾಯಿತು.

ಸುಮಾರು 60–70 ವರ್ಷಗಳ ಹಿಂದೆ ಬಿಳೆಬಾವಿಯಲ್ಲಿ ನಿರುದ್ಯೋಗಿಯೊಬ್ಬನು ಬೇರೆಯವರ ಮನೆಯ ಕಟ್ಟೆಗೆ ಕುಳಿತು ಕೆಲಸವಿಲ್ಲದೆ ಹರಟುತ್ತ ಕಾಲಕಳೆಯುತ್ತಿದ್ದನು. ಮಾಡಲು ಕೆಲಸವಿಲ್ಲ ಕೈಯಲ್ಲಿ ಹಣವೂ ಇಲ್ಲ. ಹೀಗೇ ದಿನಗಳು ಕಳೆಯುತ್ತಿರಲು ಒಂದುದಿನ ಶ್ರೀಅಕ್ಷೋಭ್ಯರ ವೃಂದಾವನದ ಎದುರಿಗೆ ನಾಲ್ಕಾಣೆಯೊಂದು ಸಿಕ್ಕಿತು. ಅದನ್ನು ತೆಗೆದುಕೊಂಡು ಅದರಿಂದ ಸ್ವಲ್ಪ ಬೆಲ್ಲ ಪುಠಾಣಿ ಕೊಂಡುಕೊಂಡು ಸಿಹಿತಿನಿಸು ಮಾಡಿ ಮಾರಾಟಮಾಡಿದನು. ತುಸು ಹಣ ಸಂಗ್ರಹವಾಯಿತು. ಅದೇ ಉದ್ಯೋಗವನ್ನು ಮುಂದುವರೆಸಿಕೊಂಡು ಹೋದನು. ದಿನ ಕಳೆದಂತೆ ದೊಡ್ಡ ವ್ಯಾಪಾರಿಯಾದನು. ತಕ್ಕಮಟ್ಟಿಗೆ ಶ್ರೀಮಂತನೂ ಆದನು. ಹೀಗೇ ಕಾಲಕಳೆಯಲು ಒಂದು ದಿನ ಒಬ್ಬ ಹುಡುಗನು ಬಂದು " ನನ್ನ ಹಣ ಕೊಡು " ಎಂದು ಕೇಳಿದನು. ಈ ಹುಡುಗ ಯಾರೆಂದು ಇವನಿಗೆ ಗುರುತು ಸಿಗಲಿಲ್ಲ "ಯಾರು ನೀನು? ಯಾವ ಹಣ?" ಎಂದು ಬೈದು ಕಳಿಸಿದನು. ಸ್ವಲ್ಪದಿನ ಬಿಟ್ಟು ಹುಡುಗ ಮತ್ತೇಬಂದು ಅದೇರೀತಿ ಕೇಳಿದನು. ಇವನು ಮತ್ತೇ ಬೈದು ಕಳಿಸಿದನು. ಈ ಘಟನೆ ಪದೇಪದೇ ನಡೆಯತೊಡಗಿತು. ಒಂದುದಿನ ವ್ಯಾಪಾರಿ ಹುಡುಗನ ಮೇಲೆ ಸಿಟ್ಟಾಗಿ " ಯಾರು ನೀನು ನನ್ನನ್ನು ಯಾಕೆ ಕಾಡುತ್ತಿರುವೆ" ಎಂದು ಅವನನ್ನು ಹೊಡೆಯಲು ಕೈಯೆತ್ತಿದಾಗ ಹುಡುಗ ಓಡಿಹೋದನು. ಆದರೆ ಹೊಡೆಯಲು ಎತ್ತಿದ ಇವನ ಕೈ ನರಗಳು ಬಿಗಿದು ಸೇದ ತೊಡಗಿತು. ಯಾವ ವೈದ್ಯರಿಂದಲೂ ಗುಣವಾಗಲಿಲ್ಲ. ನೋವು ಸಹಿಸುವುದು ಅಸಾಧ್ಯವಾಯಿತು. ಕೊನೆಗೆ ಜೋತಿಷಿಗಳೊಬ್ಬರು "ನೀವು ಯಾರಿಂದಲಾದರೂ ಸಾಲ ಪಡೆದು ತಿರುಗಿ ಕೊಡದಿದ್ದದ್ದು ಇದೆಯೇ ನೆನಪಿಸಿಕೊಳ್ಳಿ."

ಎಂದರು. ಇವನಿಗೆ ಸಾಲ ಪಡೆದ ಯಾವ ಪ್ರಸಂಗಗಳೂ ನೆನಪಾಗಲಿಲ್ಲ. ಕೆಲವು ದಿನಗಳ ನಂತರ ಒಮ್ಮೆಲೆ ನಾಲ್ಕಾಣೆ ನೆನಪಾಯಿತು. ಕೇಳಲು ಬಂದ ಹುಡುಗನ ನೆನಪಾಗಿ ಮೈ ರೊಮಾಂಚನವಾಯಿತು. ಆ ಹುಡುಗ ಬೇರಾರೂ ಅಲ್ಲ ಗುರುಗಳೇ ಎಂಬುದು ಅರಿವಾಗಿ ತಡಮಾಡದೆ ಶ್ರೀಅಕ್ಷೊಭ್ಯರ ವೃಂದಾವನಕ್ಕೆ ಧಾವಿಸಿ ಬಂದು ತಪ್ಪಾಯಿತೆಂದು ಪರಿಪರಿಯಾಗಿ ಬೇಡಿಕೊಂಡು ಹಣತಲುಪಿಸಿದನು. ಕೈ ಸೆಳೆತದ ನೋವು ದಿನದಿನಕ್ಕೆ ಕಡಿಮೆಯಾಯಿತು. [ ಈ ಪ್ರಸಂಗವನ್ನು ಬಿಳೆಬಾವಿಯ ಶ್ರೀ ಶಶಿಕಾಂತ ದೇಶಪಾಂಡೆಯವರು ತಮ್ಮ ಹಿರಿಯರಿಂದ ತಿಳಿದುಕೊಂಡು ಹೇಳಿರುವರು.] ಬಿಳೆಬಾವಿಯ ಭಕುತ ಜನರಿಗೆ ಇಂತಹ ಅನುಭವಗಳು ಸಾಕಷ್ಟಾಗಿವೆ. ಶ್ರೀಅಕ್ಷೋಭ್ಯರು ಈಗಲೂ ವೃಂದಾವನದಲ್ಲಿ ಜಾಗೃತರಾಗಿದ್ದು ಭಕ್ತರನ್ನು ಪೊರೆಯುತ್ತಿರುವರು. ಇಂತಹ ಗುರುಗಳನ್ನು ಪಡೆದ ನಾವೇ ಧನ್ಯರು.

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕು ಬಿಳೇಬಾವಿ [ತಾಳಿಕೋಟೆಯಿಂದ ಕೊಡೆಕಲ್ಲಕಡೆಗೆ ಹೋಗುವ ಮಾರ್ಗದಲ್ಲಿ 12 ಕಿ.ಮೀ.] ಗ್ರಾಮದಲ್ಲಿ ಭಾದ್ರಪದ ಕೃಷ್ಣಪಕ್ಷ ಚತುರ್ದಶಿಯಂದು ಗುರುಗಳ ಆರಾಧನೆ ವಿಜೃಂಭಣೆಯಿಂದ ನಡೆಯುತ್ತದೆ. ಮೂರುದಿನ ನಡೆಯುವ ಈ ಆರಾಧನೆಗೆ ದೂರದೂರದಿಂದ ಭಕ್ತಾದಿಗಳು ಬಂದು ಸೇರುತ್ತಾರೆ. ಶ್ರೀಅಕ್ಷೋಭ್ಯತೀರ್ಥರ ವೃಂದಾವನದ ಪಕ್ಕದಲ್ಲಿಯೇ ಶ್ರೀಕಣ್ವಮಠ ಯತಿಪರಂಪರೆಯಲ್ಲಿ ಬರುವ ನಾಲ್ಕನೇ ಯತಿಗಳಾದ ಶ್ರೀವಿದ್ಯಾನಿಧಿತೀರ್ಥರ ವೃಂದಾವನವೂ ಇದೆ. ಅದೇ ಆವರಣದಲ್ಲಿ ಶ್ರೀಆಂಜನೇಯನ ದೇವಾಲಯವಿದೆ. ಭಕ್ತಾದಿಗಳು "ಶ್ರೀಅಕ್ಷೋಭ್ಯತೀರ್ಥರು ಹಾಗೂ ಶ್ರೀವಿದ್ಯಾನಿಧಿತೀರ್ಥರ ಸೇವಾ ಸಮಿತಿ ಬಿಳಿಭಾವಿ–ನಾಗೂರ" ಎಂಬ ಟ್ರಸ್ಟ ಮಾಡಿಕೊಂಡು ಶ್ರೀಕ್ಷೇತ್ರದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ. ಆರಾಧನೆ ಸಂದರ್ಭದಲ್ಲಿ ಸೇರುವ ಭಕ್ತರ ಅನುಕೂಲಕ್ಕಾಗಿ ಕಲ್ಯಾಣಮಂಟಪವನ್ನು ನಿರ್ಮಿಸುವ ಕಾರ್ಯ ಭರದಿಂದ ಸಾಗಿದೆ. ಇನ್ನೂ ಸಾಕಷ್ಟು ಕೆಲಸಗಳು ಆಗಬೇಕಿದೆ. ಈ ಲೇಖನವನ್ನು ಬರೆಯಲು ಆಕರಗಳನ್ನು ಒದಗಿಸಿ ಸಹಕರಿಸಿದ ಗುರುಗಳ ವಂಶಸ್ಥರಾದ ಹಿರೇಕೊಟ್ನಕಲ್ಲಿನ ಶ್ರೀನರಸಿಂಗರಾವ್ ಕುಲಕರ್ಣಿ, ನಾಗೂರಿನ ಶ್ರೀಶಶಿಕಾಂತ ದೇಶಪಾಂಡೆ, ಬಾಗಲಕೋಟೆಯ ಶ್ರೀ ಜಿ.ಕೆ. ಕುಲಕರ್ಣಿ ಹಾಗೂ ಶ್ರೀಮತಿ ಕಮಲಾ ಕುಲಕರ್ಣಿ ಅವರಿಗೆ ಕೃತಜ್ಞತೆಗಳು.

ಶ್ರೀಕೃಷ್ಣಾರ್ಪಣಮಸ್ತು.

ಲೇಖಕರು : **ಡಾ. ದತ್ತಾತ್ರಯ ಜಿ. ಕುಲಕರ್ಣಿ**, ಬಾಗಲಕೋಟೆ

ಫೋ.ನಂ : 8971384471.

* * *